ಅಭಿನಯಿಸಲು ಬಂದೆ. ಅಲ್ಲಿ ನನಗೆ 'ಹುಲಿಯ' ಎನ್ನುವ ನಾಯಿಯ ಪಾತ್ರ ಕೊಟ್ಟರು. ಎಲ್ಲರೂ ಮೇಕಪ್ ಹಾಕಿಕೊಂಡು ಸ್ಟೇಜ್ ಮೇಲೆ ಕಾಣಿಸಿಕೊಳ್ಳುತ್ತಾರೆ, ನಾನು ನಾಯಿ ವೇಷದಲ್ಲಿ ಬಂದರೆ ಜನ ಹೇಗೆ ಗುರುತಿಸುತ್ತಾರೆ ಎಂದು ಅವಲತ್ತುಕೊಂಡೆ. 'ಈ ಪಾತ್ರ ನಿನಗೆ ಮನ್ನಣೆ ಕೊಡುತ್ತದೆ' ಎಂದು ಒಪ್ಪಿಸಿದರು. ಅದು ಹಾಗೇ ಆಯಿತು, 'ಹುಲಿಯ' ಪಾತ್ರ ನನ್ನ ಜೀವನವನ್ನೇ ಬದಲಾಯಿಸಿತು. 116 ಶೋಗಳಲ್ಲಿ ಹುಲಿಯನಾಗಿ ಕಾಣಿಸಿಕೊಂಡೆ. ಜನರ ಚಪ್ಪಾಳೆ ಕಲಾವಿದನಾಗುವ ಹಂಬಲಕ್ಕೆ ನೀರೆರೆಯಿತು'' ಎಂದು ನೆನಪಿಸಿಕೊಳ್ಳುತ್ತಾರೆ.

ನಟನೆಯನ್ನು ಗಂಭೀರವಾಗಿ ಪರಿಗಣಿಸಿ ರಂಗಾಯಣದಲ್ಲಿ ಒಂದು ವರ್ಷದ ಡಿಪ್ಲೊಮಾ ಇನ್ ಥಿಯೇಟರ್ ಕೋರ್ಸ್ ಮಾಡಿದರು. ಓದು ಕೈಬಿಟ್ಟಿದ್ದರೂ ಕನ್ನಡ ಸಾಹಿತ್ಯದ ನಂಟನ್ನು ಬೆಳೆಸಿಕೊಂಡರು. ಕಥೆ, ಕಾದಂಬರಿಗಳನ್ನು, ನಾಟಕಗಳನ್ನು ಪ್ರೀತಿಯಿಂದ ಓದುತ್ತಿದ್ದರು. ಒಬ್ಬ ಕಲಾವಿದನಿಗೆ ಸಾಹಿತ್ಯದ ಸ್ನೇಹ ಎಷ್ಟು ಮುಖ್ಯ ಎಂಬುದನ್ನೂ ಅರಿತರು. ಈ ನಡುವೆ ಕಿರುತೆರೆಯಲ್ಲಿ ಅವಕಾಶಗಳು ಬಂದವು. 'ಪಾರ್ವತಿ ಪರಮೇಶ್ವರ', 'ಪಡುವಾರಳ್ಳಿ ಪಡ್ಡೆಗಳು', 'ಪಾಂಡುರಂಗ ವಿಠಲ' ಐದಾರು ಧಾರಾವಾಹಿಗಳಲ್ಲಿ ನಟಿಸಿದರು.

ಸಿನಿಮಾದಲ್ಲಿ ನಟಿಸಬೇಕೆಂದು ಹೊರಟ ಅವರು ಮೊದಲ ಬಾರಿ 'ಕ್ರಾಂತಿವೀರ ಭಗತ್' ಸಿನಿಮಾದಲ್ಲಿ ನಟಿಸಿದರು. 'ಸಂತೆಯಲ್ಲಿ ನಿಂತ ಕಬೀರ', 'ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ', 'ಹ್ಯಾಪಿ ಬರ್ತಡೇ' ಸಿನಿಮಾದಲ್ಲಿ ಕಾಣಿಸಿಕೊಂಡರು. 'ದನಗಳು' ಎಂಬ ಕಲಾಪ್ರಧಾನ ಸಿನಿಮಾದಲ್ಲಿಯೂ ನಟಿಸಿದ್ದು, ಆ ಸಿನಿಮಾ ಬಿಡುಗಡೆ ಹಾದಿಯಲ್ಲಿದೆ. ಇವೆಲ್ಲದರ ನಡುವೆ ಸಿನಿಮಾರಂಗದಲ್ಲಿ ಒಂದಿಷ್ಟು ಗುರುತು ತಂದುಕೊಟ್ಟಿದ್ದು 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಸಿನಿಮಾ.

ಸದ್ಯ ಹೊಸದಾಗಿ ಘೋಷಣೆಯಾಗಿರುವ ಕನ್ನಡದ 'ಗ್ಯಾಂಗ್‌ಸ್ಟರ್' ಹಾಗೂ ಮತ್ತೊಂದು ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ.

'ಕ್ಯಾಮೆರಾ ಯಾರನ್ನಾದರೂ ಸೆರೆಹಿಡಿಯುತ್ತದೆ. ಅದರ ಮುಂದೆ ನಿಲ್ಲುವ ಅವಕಾಶ ಸಿಕ್ಕಾಗ ನಮ್ಮ ಸಂಪೂರ್ಣ ಶ್ರಮ ಹಾಕಬೇಕು. ನಮ್ಮ ಶ್ರಮ ಖಂಡಿತ ಇವತ್ತಲ್ಲ ನಾಳೆ ಜನರಿಗೆ ತಿಳಿದೇ ತಿಳಿಯುತ್ತದೆ. ಪ್ರೇಕ್ಷಕರು ಹೀರೊ, ಹೀರೊಯಿನ್, ಪೋಷಕ ಪಾತ್ರ ಯಾವುದೇ ಇರಲಿ, ಚೆನ್ನಾಗಿ ಮಾಡಿದರೆ ಮಾತ್ರ ಒಪ್ಪಿಕೊಳ್ಳುತ್ತಾರೆ. ಯಾವುದೇ ಪಾತ್ರ ಕೊಟ್ಟರೂ ಅದಕ್ಕೆ ನಾವು ಹೇಗೆ ಸಿದ್ಧಗೊಳ್ಳುತ್ತೇವೆ ಎಂಬುದು ಮುಖ್ಯ. ಭರವಸೆ ಕಳೆದುಕೊಳ್ಳಬಾರದು' ಎನ್ನುವ ಅವರಿಗೆ ಒಳ್ಳೆಯ ಕಲಾವಿದನಾಗಿ ಗುರುತಿಸಿಕೊಳ್ಳಬೇಕೆಂಬ ಹಂಬಲ. ಜನರು ಕೂಡ ಸಿನಿಮಾದ ಕಂಟೆಂಟ್ ಅನ್ನು, ಅದಕ್ಕೆ ನ್ಯಾಯ ಒದಗಿಸುವ ಕಲಾವಿದರನ್ನೇ ಮೆಚ್ಚುವುದು ಎನ್ನುವ ನಂಬಿಕೆ ಅವರದ್ದು. ■



# ಹೊಸ ಕಲಿಕೆಯಲ್ಲಿ ಶ್ರೀಮುರಳಿ



'ಬಹು ದೀರ್ಘಕಾಲದಿಂದ ನಾನು ಬಯಸುತ್ತಿದ್ದ ಪಾತ್ರ ಕೈ ಸೇರಿದೆ. ದೈಹಿಕವಾಗಿ ಹಾಗೂ ಮಾನಸಿಕವಾಗಿ ನನ್ನನ್ನು ಪರೀಕ್ಷೆಗೆ ಒಡ್ಡಲಿರುವ ಇಂಥದ್ದೊಂದು ಪಾತ್ರ ನನ್ನ ಕನಸಾಗಿತ್ತು' ಎಂದು 'ಉಗ್ರಾಯುಧಮ್' ಸಿನಿಮಾದಲ್ಲಿನ ತಮ್ಮ ಪಾತ್ರದ ಬಗ್ಗೆ ಸಂತಸದಿಂದ ಹೇಳಿಕೊಂಡಿದ್ದಾರೆ ನಟ ಶ್ರೀಮುರಳಿ.

2024ರಲ್ಲಿ ತೆರೆಕಂಡ 'ಬಘೀರ' ಸಿನಿಮಾ ಬಳಿಕ ನಟ ಶ್ರೀಮುರಳಿ ನಟನೆಯ ಸಿನಿಮಾಗಳು ತೆರೆಕಂಡಿರಲಿಲ್ಲ. ಇದೀಗ 'ಪರಾಕ್' ಹಾಗೂ 'ಉಗ್ರಾಯುಧಮ್' ಎಂಬ ಎರಡು ಪ್ರಾಜೆಕ್ಟ್‌ಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈಚೆಗೆ 'ಉಗ್ರಾಯುಧಮ್' ಸಿನಿಮಾದ ಫಸ್ಟ್ ಲುಕ್ ಬಿಡುಗಡೆಯಾಗಿದ್ದು, ಅದರಲ್ಲಿ ಬಂಡೆಯ ಮೇಲೆ ಖಡ್ಗ ಹಿಡಿದು ನಿಂತಿರುವ ಮುರಳಿ, ಸಿಪಾಯಿಯ ರೋಷಾವೇಶದಲ್ಲಿ ಗಮನಸೆಳೆಯುತ್ತಿದ್ದಾರೆ.

ಉಗ್ರಾಯುಧಮ್, 700 ವರ್ಷಗಳ ಹಿಂದಿನ ಕಥೆಯ ಸಿನಿಮಾ ಆಗಿದ್ದು, ತಮ್ಮ ಪಾತ್ರಕ್ಕಾಗಿ ಮುರಳಿ ಸಾಕಷ್ಟು ಸಿದ್ಧತೆಯಲ್ಲಿ ತೊಡಗಿಕೊಂಡಿರುವುದಾಗಿ ತಿಳಿಸಿದ್ದಾರೆ.

'ಯಾವುದೇ ನಟರಿಗೆ ಸಿಗುವ ಪಾತ್ರ ವೈಯಕ್ತಿಕವಾಗಿರುತ್ತದೆ. ಇಂಥದ್ದೊಂದು ಪಾತ್ರದ ಹಂಬಲ ನನ್ನಲ್ಲಿ ಸದಾ ಇತ್ತು. ಅಷ್ಟೇ ಜವಾಬ್ದಾರಿಯೊಂದಿಗೆ ನಿಭಾಯಿಸಬೇಕಿದೆ. ಈ ಜವಾಬ್ದಾರಿಯನ್ನು ಖುಷಿಯಿಂದ ಅಪ್ಪಿಕೊಳ್ಳುತ್ತೇನೆ' ಎಂದಿದ್ದಾರೆ.

'ನನ್ನ ಕರಿಯರ್‌ನಲ್ಲಿ ಒಂದು ರೀತಿ ಹೊಸ ಕಲಿಕೆಯು ಈ ಪಾತ್ರದಿಂದ ದಕ್ಕುತ್ತಿದೆ' ಎಂದಿರುವ ಅವರಿಗೆ, ಇಂಥ ಪಾತ್ರಗಳನ್ನು ನಿಭಾಯಿಸಲು ರಾಜಕುಮಾರ್ ಅವರೇ ಪ್ರೇರಣೆಯಂತೆ.

''ನನ್ನ ಮಾಮ ರಾಜಕುಮಾರ್ ಅವರ ಸಿನಿಮಾಗಳನ್ನು ತುಂಬಾ ನೋಡುತ್ತಿದ್ದೆ. 'ಮಯೂರ', 'ಬಬ್ರುವಾಹನ' ಸಿನಿಮಾ ನೋಡುವಾಗಲಂತೂ ನನಗೆ ಇಂಥ ಪಾತ್ರ ಯಾವಾಗ ಸಿಗಬಹುದು ಎನಿಸುತ್ತಿತ್ತು. ಅವರು ಎಂದಿಗೂ ಮಾರ್ಗದರ್ಶಕವಾಗಿರುತ್ತಾರೆ'' ಎಂದು ಸ್ಮರಿಸಿದ್ದಾರೆ. ■